ದಿನಾಂಕಃ 25-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ವಾದಿ ಪರ ವಕೀಲರಾದ ಶ್ರೀ. ಎ ಎಸ್ ವಕೀಲರಿಂದ

ನಾನು ಓದಿರುವುದಿಲ್ಲ. ನಾನು, ವಾದಿ ಮತ್ತು 1 ನೇ ಪ್ರತಿವಾದಿ ಎಲ್ಲರೂ ಒಂದೇ ಊರಿನವರು ಎಂದರೆ ಸರಿ. ಚೌಡಪ್ಪನವರ ತಾಯಿ ವೆಂಕಟಮ್ಮ ಕೋಂ ವೆಂಕಟಪ್ಪ ಎಂದರೆ ಗೊತ್ತಿರುವುದಿಲ್ಲ. ಚೌಡಪ್ಪ ನವರ ತಂದೆ ತಾಯಿ ಯಾರು ಅಂತ ಗೊತ್ತಿರುವುದಿಲ್ಲ, ಚೌಡಪ್ಪನವರ ಹೆಂಡತಿ ಹೆಸರು ಲಕ್ಷಮ್ಮ ಎಂದರೆ ಗೊತ್ತು. ಚೌಡಪ್ಪ ಮತ್ತು ಲಕ್ಷ್ಮಮ್ಮನಿಗೆ ಇಬ್ಬರು ಮಕ್ಕಳು ಎಂದರೆ ಅವರು ವಾದಿ ಮತ್ತು 1 ನೇ ಪ್ರತಿವಾದಿ ಎಂದರೆ ಸರಿ.

ಜಮೀನು ಕೊಂಡು ಕೊಳ್ಳುವಾಗ ಅದರ ಮೂಲತಃ ಸರ್ವೆ ನಂ. 59/2 ಎಂದರೆ ಸರಿ. ಆ ಸರ್ವೆ ನಂಬರ್ ಚೌಡಪ್ಪ ರವರಿಗೆ ಯಾವ ರೀತಿ ಬಂತು ಅಂತ ತಿಳಿದುಕೊಂಡಿರುವುದಿಲ್ಲ. ಸರ್ವೆ ನಂ. 59/2 ರಲ್ಲಿ 3 ಎಕರೆ 35 ಗುಂಟೆ ಅವರ ತಾಯಿ ಕಡೆಯಿಂದ ಬಂದಿರುತ್ತದೆ ಎಂದರೆ ಅವೆಲ್ಲ ಗೊತ್ತಿರುವುದಿಲ್ಲ. ಕೊಂಡು ಕೊಳ್ಳುವಾಗ ಯಾವ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೀರಿ ಎಂದರೆ ಪಹಣಿಯನ್ನು ಪರಿಶೀಲನೆ ಮಾಡಿರುತ್ತೇನೆ. ಪಹಣಿಯಲ್ಲಿ ಯಾವ ರೀತಿ ಬಂತು ಅಂತ ತಿಳಿದುಕೊಂಡಿರುತ್ತೀರಾ ಎಂದರೆ ಎಲ್ಲಾ ಸರಿಯಾಗಿದೆ ನೀವು ತೆಗೆದುಕೊಳ್ಳಿ ಅಂತ ಹೇಳಿದರು. ನಿಮ್ಮ ಪ್ರಮಾಣ ಪತ್ರದಲ್ಲಿ ಆ ಜಮೀನನ್ನು ಏಕೆ ಮಾರಾಟ ಮಾಡಿದ್ದರು ಅಂತ ಬರೆದಿದೆಯಾ ಎಂದರೆ ಸೊಣ್ಣಪ್ಪರೆಡ್ಡಿ ರವರಿಗೆ ಮೆದುಳು ಜ್ವರ ಬಂದಿದ್ದು ಮತ್ತು ಸೊಸೈಟಿಯಲ್ಲಿ ಲೋನ್ ಪಡೆದಿದ್ದರಿಂದ. ಈ ವಿಚಾರವನ್ನು ನಿಮ್ಮ ಪ್ರತಿವಾದ ಪತ್ರದಲ್ಲಿ ತಿಳಿಸಿರುತ್ತೀರಾ ಎಂದರೆ ತಿಳಿಸಿರುತ್ತೇನೆ. ಯಾವ ವಯಸ್ಸಿನಲ್ಲಿ ಸೊಣ್ಣಪ್ಪನಿಗೆ ಮೆದುಳು ಜ್ವರ ಬಂದಿತ್ತು ಎಂದರೆ 12 ಮತ್ತು 13 ನೇ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಸೊಣ್ಣಪ್ಪರೆಡ್ಡಿ ರವರಿಗೆ ಯಾವುದೇ ಖಾಯಿಲೆ ಬಂದಿರುವುದಿಲ್ಲ ಹಾಗೂ ಬಳಲುತ್ತಿರುವುದಿಲ್ಲ ಎಂದರೆ ಸರಿಯಲ್ಲ. ಚೌಡಪ್ಪ ರವರಿಗೆ ಗೊತ್ತಿಲ್ಲದ ಹಾಗೆ ಯಾಮಾರಿಸಿ ಜಮೀನು ಖರೀದಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಜಮೀನಿನಲ್ಲಿ ನೀವು ಯಾವತ್ತೂ ಸ್ವಾಧೀನ ಇಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ

ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ ಚೌಡಪ್ಪನಿಗೆ ಇರುವ ಮಕ್ಕಳನ್ನು ನಮೂದು ಮಾಡಿರುತ್ತೀರಾ ಎಂದರೆ ಮಗ ಬಂದಿದ್ದರು. ಕ್ರಯ ಪತ್ರದಲ್ಲಿ ಮೆದುಳು ಜ್ವರ ಬಂದು ಬಳಲುತ್ತಿರುವ ಬಗ್ಗೆ ಬರೆಸಿರುವುದಿಲ್ಲ. ಕಷ್ಟ ಇತ್ತು ಅಂತ ಹೇಳಿದ್ದರು. ಚೌಡಪ್ಪನಿಗೆ ಅದು ಕ್ರಯ ಪತ್ರ ಅಂತ ಗೊತ್ತಿರುವುದಿಲ್ಲ ಆತನನ್ನು ಕರೆದುಕೊಂಡು ಬಂದು ಮೋಸ ಮಾಡಿ ದಾಖಲೆಗೆ ಸಹಿ ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಸರ್ವೆ ನಂ. 59 ರಲ್ಲಿ ಈಗಲೂ ವಾದಿ ಮತ್ತು 1 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದು ನೀವು ಎಂದಿಗೂ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಜಾಂಶ ಗೊತ್ತಾದರೆ ತೊಂದರೆಯಾಗುತ್ತದೆ ಎಂದು 3 ನೇ ಪ್ರತಿವಾದಿಗೆ ನೀವು ಕ್ರಯ ಪತ್ರ ಬರೆದುಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಅದೇ ರೀತಿ ಆಕೆಯ ಕಡೆಯಿಂದ ಒಂದೇ ವರ್ಷಕ್ಕೆ ಜಮೀನು ಖರೀದಿ ಮಾಡಿರುವ ರೀತಿಯಲ್ಲಿ ಬರೆಸಿಕೊಂಡಿರುತ್ತೀರಿ ಎಂದರೆ ಪುನಃ ಮಾರಾಟ ಮಾಡಿದ್ದಕ್ಕೆ ಮಾಡಿಕೊಂಡಿರುತ್ತೇನೆ. ಚೌಡಪ್ಪನಿಗೆ ಜಮೀನು ಮಾರಾಟ ಮಾಡುವ ಯಾವುದೇ ಉದ್ದೇಶ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಗೂ ಹಕ್ಕು ಇದ್ದು ಅದನ್ನು ಮರೆಮಾಚಿ ಸುಳ್ಳು ಕ್ರಯ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಒಂದೇ ಪಹಣಿಯಲ್ಲಿ ಇದ್ದರೆ ವಾದಿಗೆ ಗೊತ್ತಾಗುತ್ತದೆ ಅಂತ ಹೇಳಿ 3 ನೇ ಪ್ರತಿವಾದಿಗೆ ಖರೀದಿ ಮಾಡಿದ ರೀತಿ ಮಾಡಿ ನಂತರ ಪೋಡಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಈಗಲೂ ವಾದಿಯರು ಸ್ವಾಧೀನ ಇದ್ದು ಸುಳ್ಳು ಕ್ರಯ ಪತ್ರ ಬನಾವಟ್ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. . ಸರ್ವೆ ನಂ. 59/2 ರಲ್ಲಿ ವಾದಿಗೆ ಹಕ್ಕು ಇದೆ ಎಂದರೆ ಉಳಿಕೆ ಜಮೀನಿನಲ್ಲಿ ಹಕ್ಕು ಇದೆ ಎಂದು ನುಡಿಯುತ್ತಾರೆ. ನೀವು ನೀಡಿರುವ ದಾಖಲೆಗಳಿಗೆ ವಾದಿಯು ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.